ರಾಜ್ಯದಲ್ಲಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿಗಳ ಸ್ಥಾಪನೆಗೆ ಸದಸ್ಯತ್ವದ ನಿರ್ಬಂಧ.

321 (1859) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ)ರ ಪರವಾಗಿ ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿಗಳನ್ನು 15,000 ಜನಸಂಖ್ಯೆಗೆ ಸ್ಥಾಪನೆ ಮಾಡಲು ನಿರ್ಬಂಧ ಹಾಕಿರುವುದಕ್ಕೆ ಕಾರಣವೇನು;

ಆ. ರಾಜ್ಯದಲ್ಲಿಯ ಕೋ–ಆಪರೇಟಿವ್ ಕ್ರೆಡಿಟ್ ಸಂಘಗಳ ಸಂಖ್ಯೆ ಎಷ್ಟು;

ಇ. ಗ್ರಾಮಮಟ್ಟದಲ್ಲಿ ಇಂಥ ಸಂಸ್ಥೆಗಳ ನಿರ್ಮಾಣದಿಂದ ಬಡವರಿಗೆ ಉದ್ಯೋಗಾವಕಾಶ ಮಾಡಲು ಹಾಗೂ ಅಭಿವೃದ್ಧಿ ಹೊಂದಲು ಸಹಾಯ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಈ ರೀತಿಯ ನಿರ್ಬಂಧ ಹಾಕಿರುವುದಿಲ್ಲ.

ಆ. ರಾಜ್ಯದಲ್ಲಿ ಒಟ್ಟು 534 ಪತ್ತಿನ ಸಹಕಾರ ಸಂಘಗಳು ಮತ್ತು 1109 ನೌಕರರ ಪತ್ತಿನ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ.

ಇ. ಸಹಕಾರ ಸಂಸ್ಥೆಗಳು ಸದಸ್ಯರುಗಳ ಆರ್ಥಿಕ ಬೇಡಿಕೆಗಳನ್ನು ಪೂರೈಸಲು ಸಹಾಯ ಮಾಡುತ್ತಿರುವುದು ಸರ್ಕಾರದ ಗಮನದಲ್ಲಿದೆ.

ಶ್ರೀ ಎಂ. ಎಸ್. ಆತ್ಮಾನಂದ (ಶ್ರಿ ಮಲ್ಲಾರಿಗೌಡ ಎಸ್. ಪಾಟೀಲ ಅವರ ಪರವಾಗಿ):– ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಗಳ ಸಂಘದ ಸದಸ್ಯರ ಆರ್ಥಿಕ ಬೇಡಿಕೆಗಳನ್ನು ಪೂರೈಸಲು ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿಗಳನ್ನು ಪ್ರಾರಂಭ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂದು ಕೇಳಬಯಸುತ್ತೇನೆ. ಈ ಆಡಳಿತ ಮಂಡಳಿಯಲ್ಲಿ ಎಲ್ಲಾ ಕೋಮಿನವರಿಗೂ ಪ್ರಾತಿನಿಧ್ಯವನ್ನು ನೀಡಲು ಇಲಾಖೆ ಏನು ಕ್ರಮ ಕೈಗೊಳ್ಳುತ್ತದೆಂದು ಕೇಳುತ್ತೇನೆ. ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ವತಿಯಿಂದ ಕೊಡತಕ್ಕಂಥ ಷೇರು ಹಣವನ್ನು ಕೊಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯಲ್ಲಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟೀಸ್ ಹೆಚ್ಚಿನ ಸಂಖ್ಯೆಯಲ್ಲಿ ರಿಜಿಸ್ಟರ್ ಮಾಡುತ್ತಿದ್ದಾರೆ. ಆದರೆ ಎಕನಾಮಿಕಲ್ ವಯಬಲ್ ಇರಬೇಕೆಂದು ಹೇಳಿ ಸರ್ಕಾರದವರು ಹಿಂದೆ ಒಂದು ಸುತ್ತೋಲೆಯನ್ನು ಕನಿಷ್ಠ 15 ಸಾವಿರ ಜನಸಂಖ್ಯೆ ಇರತಕ್ಕಂಥ ಏರಿಯಾದಲ್ಲಿ ಮಾತ್ರ ಒಂದೊಂದು ಮಾಡಬೇಕು. ಏಕೆಂದರೆ ಅಲ್ಲಿ ವ್ಯವಸಾಯ ಸಹಕಾರಿ ಸಂಘಗಳು ಕೂಡ ಇರುತ್ತವೆ. ಅದಕ್ಕೆ ಅವರ ಕೆಲಸ ಮತ್ತು ಇವರ ಕೆಲಸ ಎರಡೂ ಡ್ಯೂಪ್ಲಿಕೇಷನ್ ಆಗಬಾರದು. ಆ ಸೊಸೈಟಿಗೆ ತೊಂದರೆ ಆಗಬಾರದು. ಅನ್ನತಕ್ಕಂಥ ದೃಷ್ಟಿಯಿಂದ ಮೊದಲು ನಿರ್ಬಂಧ ಹಾಕಿತ್ತು. ಆದರೆ ಇತ್ತೀಚೆಗೆ ಅದನ್ನು ತೆಗೆದು 8 ಸಾವಿರದಿಂದ 10 ಸಾವಿರದ ಒಳಗೆ ಜನಸಂಖ್ಯೆ ಇದ್ದರೆ ಅಂಥ ಕಡೆಯೂ ಕೂಡ ರಿಜಿಸ್ಟರ್ ಮಾಡಬಹುದು ಎನ್ನತಕ್ಕದ್ದನ್ನು ನಾವು ಹೇಳಿದ್ದೇವೆ. ಸುದ್ಯೆವದಿಂದ ಆ ಏರಿಯಾದೊಳಗೆ ಈ ಕೆಲಸ

ಸ್ವಲ್ಪ ಒಳ್ಳೆಯ ರೀತಿಯಲ್ಲಿ ನಡೆದಿದೆ. ಆದೊಂದೇ ಕಾರಣಕ್ಕೆ ನಾವು ಎಲ್ಲವನ್ನೂ ಕೂಡ ರಿಲ್ಯಾಕ್ಸ್ ಮಾಡುವುದಕ್ಕಾಗುವುದಿಲ್ಲ. ಒಟ್ಟಾರೆ ನಮ್ಮ ರಾಜ್ಯದಲ್ಲಿರತಕ್ಕಂಥ 1109 ನೌಕರರ ಪತ್ತಿನ ಸಹಕಾರಿ ಸಂಘಗಳು ಮತ್ತು 534 ವ್ಯವಸಾಯೇತರರ ಪತ್ತಿನ ಸಹಕಾರ ಸಂಘಗಳು ಇವೆ. ಅದರಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಸುಮಾರು 110 ವ್ಯವಸಾಯೇತರ ಪತ್ತಿನ ಸಹಕಾರಿ ಸಂಘಗಳು ಮತ್ತು 165 ನೌಕರರ ಪತ್ತಿನ ಸಹಕಾರಿ ಸಂಘಗಳು ಇವೆ. ಈಗಾಗಲೇ ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿಗೆ ದಿನ ದಿನ ಅರ್ಜಿಗಳು ಬರುತ್ತಿದೆ. ಆದರೆ ಎಲ್ಲೆಲ್ಲಿ ಎಕನಾಮಿಕಲ್ ಫೀಸಿಬಲ್ ಇದೆ ಮತ್ತು ನಮ್ಮ ಪ್ರೈಮರಿ ಕೋ-ಆಪರೇಟಿವ್‌ಗಳಿಗೆ ತೊಂದರೆಯಾಗುವುದಿಲ್ಲ ಅಂತ ಕಡೆ ನಾವು ಪರ್ಮಿಷನ್ ಕೊಡುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ :– ಮಾನ್ಯ ಅಧ್ಯಕ್ಷರೇ, ಎಲ್ಲಾ ಕೋಮಿನವರಿಗೂ ಪ್ರಾತಿನಿಧ್ಯವನ್ನು ಕೊಡಲಿಕ್ಕೆ ಏನು ಕ್ರಮಕ್ಕೆಗೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಯಾರೂ ಬಂದು ನಮ್ಮಲ್ಲಿ ಕೇಳುವುದೇ ಇಲ್ಲ. ಏಕೆಂದರೆ ಅವರವರದ್ದೇ ಹಣ ಇದೆ. ಅವರು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಸರ್ಕಾರ ಅವರಿಗೆ ಹಣ ಕೊಡತಕ್ಕಂಥ ಪ್ರಸಂಗ ಬರುವುದಿಲ್ಲ.

ಬಾಡಿಗೆ ನಿಯಂತ್ರಣಾಧಿಕಾರಿಗಳ ಕಚೇರಿಗಳ ಸಂಖ್ಯೆ

323 (1923): ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಾಡಿಗೆ ನಿಯಂತ್ರಣ ಕಚೇರಿಗಳು ರಾಜ್ಯದಲ್ಲಿ ಎಲ್ಲಿವೆ, ಎಷ್ಟಿವೆ;

ಆ. ಪ್ರತಿ ತಿಂಗಳು ಸಿಬ್ಬಂದಿ ಸಂಬಳ ಮತ್ತು ಇತರೆ ಬಾಬ್ತುಗಳಿಗೆ ತಗಲುವ ಖರ್ಚು ಎಷ್ಟು;

ಇ. ಪ್ರತಿ ತಿಂಗಳಲ್ಲಿ ಎಷ್ಟು ಅರ್ಜಿದಾರರಿಗೆ ಮನೆಗಳನ್ನು ನೀಡುತ್ತಿದ್ದಾರೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ. 36 ಬಾಡಿಗೆ ನಿಯಂತ್ರಣ ಕಚೇರಿಗಳು ರಾಜ್ಯದಲ್ಲಿವೆ. (ಪಟ್ಟಿ ಲಗತ್ತಿಸಿದೆ)

ಆ. ಪ್ರತಿ ತಿಂಗಳು ಸಿಬ್ಬಂದಿ ಸಂಬಳ ಮತ್ತು ಇತರೆ ಖರ್ಚು ಈ ಕೆಳಕಂಡಂತಿದೆ.

ಬೆಂಗಳೂರು ವಿಭಾಗ:

	ಸಿಬ್ಬಂದಿ ಸಂಬಳ ರೂ.ಗಳಲ್ಲಿ	ಇತರೆ ಖರ್ಚು ರೂ.ಗಳಲ್ಲಿ
ಬೆಂಗಳೂರು (ನಗರ)	1,81,174	20,009
ದಾವಣಗೆರೆ ನಗರ	0,03,600 (ಇತರ ಖರ್ಚು ಸೇರಿ)	–

ಮೈಸೂರು ವಿಭಾಗ:

ಮೈಸೂರು	0,07,337	ಇತರೆ ಖರ್ಚು ಸೇರಿ